ಕರ್ನಾಟಕ ವಿಧಾನಸಭೆ

290 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ [ಭಾಲ್ಕಿ]
ಮಾನ್ಯ ಉನ್ನತ ಶಿಕ್ಷಣ ಸಚಿವರು

ಅ. ಭಾಲ್ಕಿ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು; ಇವು ಎಲ್ಲೆಲ್ಲಿ ಇವೆ;

ಪಟ್ಟಣದಲ್ಲಿ ಒಂದು ಕಾಲೇಜು ಪ್ರಾರಂಭಿಸಲಾಗಿದೆ.

ಆ. ಈ ಪೈಕಿ ಎಷ್ಟು ಕಾಲೇಜಿಗೆ ಸ್ವಂತ ಕಟ್ಟಡ ಇದೆ; ಎಷ್ಟು ಕಾಲೇಜುಗಳು ಕಟ್ಟಡದ ಸಮಸ್ಯೆಯನ್ನು ಎದುರಿಸುತ್ತಿವೆ;

ಭಾಲ್ಕಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು 2007–08ನೇ ಸಾಲಿನಲ್ಲಿ ಪ್ರಾರಂಭಿಸಿದ್ದು, ಕಟ್ಟಡ ಕಾಮಗಾರಿಗೆ ರೂ.75.00 ಲಕ್ಷಗಳ ಅಂದಾಜಿಗೆ ರೂ.22.50 ಲಕ್ಷಗಳ ಅನುದಾನ ಮಂಜೂರು ಮಾಡಲಾಗಿತ್ತು. ಆದರೆ, ನಿವೇಶನ ಇದುವರೆಗೂ ಲಭ್ಯವಾಗಿರುವುದಿಲ್ಲ. ನಿವೇಶನ ಪಡೆಯುವ ಪ್ರಕ್ರಿಯೆಗಳು ಜಾರಿಯಲ್ಲಿವೆ. ನಿವೇಶನ ಲಭ್ಯವಾದ ತಕ್ಷಣ ಮತ್ತೆ ಅನುದಾನ ಒದಗಿಸಿ ಕಟ್ಟಡ ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಇ. ಪದವಿ ಕಾಲೇಜಿಗೆ ಕಟ್ಟಡದ ಸಮಸ್ಯೆ ಇರುವುದರಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಯಾವ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ.

ಕಾಲೇಜಿನ ತರಗತಿಗಳನ್ನು ತಾತ್ಕಾಲಿಕವಾಗಿ ಬಾಲ್ಕಿ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆಸಲಾಗುತ್ತಿದೆ.

ಈ. ಕಟ್ಟಡದ ಸಮಸ್ಯೆ ಇರುವ ಡಿಗ್ರಿ ಕಾಲೇಜಿಗೆ ಬಾಡಿಗೆ ಕಟ್ಟಡವನ್ನು ಪಡೆದುಕೊಂಡು ಕಾಲೇಜನ್ನು ನಡಸುವ ಬಗ್ಗೆ ಸರ್ಕಾರದ ಮುಂದಿರುವ ಕ್ರಮಗಳೇನು

ಸರ್ಕಾರಿ ಕಟ್ಟಡ ಲಭ್ಯವಿಲ್ಲದಿದ್ದಲ್ಲಿ ಖಾಸಗಿಯವರಿಂದ ಬಾಡಿಗೆ ಆಧಾರದ ಮೇಲೆ ನಡೆಸಲು ಪ್ರಾಂಶುಪಾಲರಿಂದ ಪ್ರಸ್ತಾವನೆ ಬಂದಲ್ಲಿ ಅನುಮತಿ ನೀಡಲಾಗುವುದು.

ಇಡಿ:42: ಯೋಸಕ 2009

ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

291 ಶ್ರೀ ಹೆಚ್.ಡಿ.ರೇವಣ್ಣ
ಉನ್ನತ ಶಿಕ್ಷಣ ಸಚಿವರು

ಅ) ಹಾಸನ ಜಿಲ್ಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಸಂಖ್ಯೆ ಎಷ್ಟು ಹಾಗೂ ಖಾಸಗಿ ಕಾಲೇಜುಗಳಲ್ಲಿರುವ ಬಿ.ಬಿ.ಎಂ.ಕೋರ್ಸ್‌ಗಳಿರುವ ಸಂಖ್ಯೆ ಎಷ್ಟು ಮಾಹಿತಿ ನೀಡುವುದು;